(ಕರ್ನಾಟಕ ವಿಧಾನ ಸಭೆ)

KARNATAKA LEGISLATIVE ASSEMBLY

ಮಂಗಳವಾರ ೨೪ನೇ ಮಾರ್ಚಿ ೧೯೯೨, ಚೈತ್ರ ೪, ೧೯೧೪ ಶಕ
ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ ೯.೫೫ ಗಂಟೆಗೆ ಸಮಾವೇಶಗೊಂಡಿತು.

ಉಪಾಧ್ಯಕ್ಷಿಣಿಯವರು (ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು) ಪೀಠವನ್ನು
ಅಲಂಕರಿಸಿದ್ದರು.

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು.

ಶ್ರೀ ಕೆ.ಎಸ್. ಈಶ್ವರಪ್ಪ:- ಮಾನ್ಯ ಉಪಾಧ್ಯಕ್ಷರೇ ...

ಉಪಾಧ್ಯಕ್ಷಿಣಿಯವರು:- ಮಾನ್ಯ ಈಶ್ವರಪ್ಪನವರೇ, ತಾವು ಏನು ಮಾತನಾಡುವುದಿದ್ದರೂ, ಪ್ರಶ್ನೋತ್ತರವಾದ ಮೇಲೆ ಮಾತನಾಡಿ, ತಮಗೆ ಅವಕಾಶ ಕೊಡುತ್ತೇನೆ. ಆಗ ತಾವು ಮಾತನಾಡಿ.

ಶ್ರೀ ಕೆ.ಎಸ್. ಈಶ್ವರಪ್ಪ:- ನಿಮ್ಮ ಮಾತಿಗೆ ಗೌರವ ಕೊಡುತ್ತೇನೆ, ಆದರೆ ಈ ರಾಜ್ಯದ ...

ಉಪಾಧ್ಯಕ್ಷಿಣಿಯವರು:- ಪ್ರಶ್ನೋತ್ತರ ಮುಗಿಯಲಿ ಆನಂತರ ಕೇಳಿ. I will give you time to say what you want. ಈಗ ಪ್ರಶ್ನೆ: ೪೦೨ (೨೧೬೫) ಪ್ರಶ್ನೆಯನ್ನು ಮಾನ್ಯ ಕರಿಯಣ್ಣನವರ ಪರವಾಗಿ ಶ್ರೀಮತಿ ಮೋಟಮ್ಮನವರು ಕೇಳಬಹುದು.

ಶ್ರೀಮತಿ ಮೋಟಮ್ಮ:- ನನಗೆ ಉತ್ತರದ ಪ್ರತಿ ಬರದೇ ಇರುವುದರಿಂದ, ನಾನು ಉಪ ಪ್ರಶ್ನೆಯನ್ನು ಕೇಳಲಾಗುತ್ತಿಲ್ಲ. ಉತ್ತರದ ಪ್ರತಿ ಕಳುಹಿಸಿಕೊಡಿ.

ಶ್ರೀ ಎಸ್. ಬಂಗಾರಪ್ಪ:- ಈಗ ಬೇರೆ ಪ್ರಶ್ನೆ ತೆಗೆದುಕೊಳ್ಳಬಹುದು, ಆನಂತರ ಬೇಕಾದರೆ, ಈ ಪ್ರಶ್ನೆಯ ವಿಚಾರದಲ್ಲಿ ಉಪ ಪ್ರಶ್ನೆಯನ್ನು ಅವರು ಕೇಳಲಿ.

ಉಪಾಧ್ಯಕ್ಷಿಣಿಯವರು:- ಪ್ರಶ್ನೆ: ೪೦೩ (೨೦೯೩) ನೇ ಪ್ರಶ್ನೆ ಕೇಳಲು ಶ್ರೀ ಜೆ.ಸಿ. ಮಾಧುಸ್ವಾಮಿಯವರು ಹಾಜರಿಲ್ಲವಾದ್ದರಿಂದ ಶ್ರೀ ಎಂ.ವಿ. ವೆಂಕಟಪ್ಪನವರು ೪೦೪ (೧೩೪೭) ನೇ ಪ್ರಶ್ನೆ ಕೇಳಬಹುದು.

ಸರ್ಕಾರಿ ನೌಕರರುಗಳ ನಿವೃತ್ತಿ ವಯಸ್ಸಿನ ಬಗ್ಗೆ

೧೩೪೭. ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು):- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಈಗಿನ ಸರ್ಕಾರಿ ನೌಕರರ ನಿವೃತ್ತಿ ವಯಸ್ಸೆಷ್ಟು?

ಆ) ಸರ್ಕಾರಿ ನೌಕರರ ನಿವೃತ್ತಿ ವಯಸ್ಸು ೫೫ ವರ್ಷ ಹೊಂದಿರುವ ರಾಜ್ಯಗಳ ಸಂಖ್ಯೆ ಎಷ್ಟು?

ಇ) ಕರ್ನಾಟಕ ರಾಜ್ಯದಲ್ಲಿ ನಿವೃತ್ತಿ ವಯಸ್ಸನ್ನು ಇಳಿಸುವ ಬಗ್ಗೆ ಏನಾದರೂ ಪ್ರಸ್ತಾವನೆ ಇದೆಯೇ?

ಈ) ಹಾಗಿದ್ದಲ್ಲಿ ಇದಕ್ಕೆ ಕಾರಣ?

ಉ) ಸರ್ಕಾರಿ ನೌಕರರು ತಮ್ಮ ಕೆಲಸದಲ್ಲಿ ವಿಳಂಬ ಮಾಡುತ್ತಿದ್ದಾರೆ ಎಂಬ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಊ) ಹಾಗಿದ್ದಲ್ಲಿ ಈ ದಿಸೆಯಲ್ಲಿ ನಿರ್ದಿಷ್ಟ ನಿರ್ಣಯ ತೆಗೆದುಕೊಳ್ಳಲು ಸರ್ಕಾರ ನಿರ್ಧರಿಸಿದೆಯೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು):-

ಅ) ೫೮ ವರ್ಷಗಳು.

ಆ) ಲಭ್ಯವಿರುವ ೧೪ ರಾಜ್ಯಗಳ ಮಾಹಿತಿಯಲ್ಲಿ, ಕೇರಳ ರಾಜ್ಯದಲ್ಲಿ ಸರ್ಕಾರಿ ನಾಕರರ ನಿವೃತ್ತಿ ವಯಸ್ಸು ೫೫ ಆಗಿರುತ್ತದೆ. ಇನ್ನುಳಿದ ೧೩ ರಾಜ್ಯಗಳಲ್ಲಿ ಸರ್ಕಾರಿ ನೌಕರರ ನಿವೃತ್ತಿ ವಯಸ್ಸು ೫೮ ವರ್ಷಗಳಾಗಿರುತ್ತದೆ.

ಇ) ಇಲ್ಲ.

ಈ) ಮೇಲಿನ ಉತ್ತರದಿಂದಾಗಿ ಉದ್ಭವಿಸುವುದಿಲ್ಲ.

ಉ) ಇಲ್ಲ.

ಊ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಂ.ವಿ. ವೆಂಕಟಪ್ಪ:- ಮಾನ್ಯ ಉಪಾಧ್ಯಕ್ಷರೇ, ಸರ್ಕಾರದವರು ಈ ಅಧಿಕಾರಿಗಳ ನಿವೃತ್ತಿ ವಯಸ್ಸನ್ನು ಏನಾದರೂ ಕಡಿಮೆ ಮಾಡಬೇಕೆಂದು ಆಲೋಚನೆ ಮಾಡುತ್ತಿದ್ದಾರೆಯೇ?

ಶ್ರೀ ಎಸ್. ಬಂಗಾರಪ್ಪ:- ಮಾನ್ಯ ಉಪಾಧ್ಯಕ್ಷರೇ, ಈಗಿರುವ ೫೮ ವರ್ಷಗಳ ನಿವೃತ್ತಿ ವಯಸ್ಸನ್ನು ಕಡಿಮೆ ಮಾಡತಕ್ಕ ವಿಚಾರ ಸದ್ಯಕ್ಕೆ ಸರ್ಕಾರದ ಮುಂದೆ ಯಾವುದೂ ಕೂಡ ಇಲ್ಲ. ಸದ್ಯಕ್ಕೆ ಈಗಿರತಕ್ಕ ನಿವೃತ್ತಿ ವಯಸ್ಸನ್ನೇ ಮುಂದುವರಿಸಿಕೊಂಡು ಹೋಗಬೇಕೆಂಬ ವಿಚಾರವನ್ನು ಇಟ್ಟುಕೊಂಡಿದ್ದೇವೆ.

ಶ್ರೀ ಎಂ.ವಿ. ವೆಂಕಟಪ್ಪ:- ಇವತ್ತು ಲಕ್ಷಾಂತರ ಜನ ನಿರುದ್ಯೋಗಿಗಳಿದ್ದಾರೆ, ಅವರಿಗೆ ಕೆಲಸ ಕೊಡುವುದಕ್ಕೆ ಬೇರೆ ಏನಾದರೂ ಏರ್ಪಾಡು ಮಾಡುತ್ತೀರಾ?

ಶ್ರೀ ಎಸ್. ಬಂಗಾರಪ್ಪ:- ಕೆಲವು ಕೇಂದ್ರ ಸರ್ಕಾರದ ಯೋಜನೆಗಳು, ಮತ್ತೆ ಕೆಲವು ರಾಜ್ಯ ಸರ್ಕಾರದ ಯೋಜನೆಗಳು ಇವೆ. ನಾನು ಅವುಗಳ ಪಟ್ಟಿ ಮಾಡಲಾರೆ, ಆದರೆ ಕೆಲವು ಕಾರ್ಯಕ್ರಮಗಳನ್ನು ನಾವು ಹಾಕಿದ್ದೇವೆ, ಎಂಪ್ಲಾಯ್‌ಮೆಂಟ್ ಜನರೇಟ್ ಮಾಡುವ ಬಗ್ಗೆ ಬೇರೆ ಸಮಯದಲ್ಲಿ ವಿಚಾರ ಮಾಡೋಣ. ಈ ವಿಷಯದಲ್ಲಿ ಮಾನ್ಯ ಸದಸ್ಯರ ಅಭಿಪ್ರಾಯವನ್ನು

ಕೇಳುವುದಕ್ಕೆ ಸರ್ಕಾರ ಸಿದ್ಧವಾಗಿದೆ. ಎಂಪ್ಲಾಯ್‌ಮೆಂಟ್ ಎಂದರೆ, ಪರ್ಮನೆಂಟ್ ಎಂಪ್ಲಾಯ್‌ಮೆಂಟೇ ಅಥವಾ ತಾತ್ಕಾಲಿಕ ಎಂಪ್ಲಾಯ್‌ಮೆಂಟ್ ಅಥವಾ ದಿನಗೂಲಿ ಮೇಲೆ ತೆಗೆದುಕೊಳ್ಳಬೇಕೇ ಎಂಬುದನ್ನು ವಿಚಾರ ಮಾಡೋಣ. ಈಗ ಉದಾಹರಣೆಗೆ 'ವಿಶ್ವ' ಕಾರ್ಯಕ್ರಮವಿದೆ. I have already said on the floor of the House that even the local girls and boys who are educated like SSLC passed or BA passed, or something like that, ಲೋಕಲ್ ಆಗಿ ರೆಕ್ರೂಟ್‌ಮೆಂಟ್ ಮಾಡಿಕೊಳ್ಳಬೇಕೆನ್ನುವ ವಿಚಾರ ಹೇಳಿದ್ದೇವೆ. But, they will never be government employees. ಆದು ಬರುವುದಿಲ್ಲ. ಹಾಗೆ ಮಾಡಬೇಕೆಂಬ ವಿಚಾರವನ್ನು ಇಟ್ಟು ಕೊಂಡಿದ್ದೇವೆ. ಆದಷ್ಟು ಮಟ್ಟಿಗೆ ಮುಂದೆ ಕೆಲವು ಯೋಜನೆಗಳಿಗೆ, ಯಾರು ಓದಿದ್ದಾರೆ ಅವರಿಗೆ ಈ ಸ್ಕೀಮಿನಲ್ಲಿ ಕೆಲಸ ಕೊಡಬೇಕೆಂಬ ವಿಚಾರ ಇಟ್ಟುಕೊಂಡಿದ್ದೇವೆ. ಇದರ ಬಗ್ಗೆ ನಾನು ತಮ್ಮ ಸಲಹೆಯನ್ನು ನಿರೀಕ್ಷೆ ಮಾಡುತ್ತೇನೆ.

ಉಪಾಧ್ಯಕ್ಷಿಣಿಯವರು:- ಮಾನ್ಯ ಸಿದ್ದಯ್ಯನವರೇ, ತಮ್ಮ ಚುಕ್ಕೆ ಗುರುತಿನ ಪ್ರಶ್ನೆ ಳಂಟ (೧೫೦೭) ನ್ನು ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ಗೆ ಟ್ರಾನ್ಸ್‌ಫರ್ ಮಾಡಿರುತ್ತೇವೆ. ಅವರು ಸ್ವಲ್ಪ ಟೈಮ್ ಕೇಳಿದ್ದಾರೆ

ಶೀಪ್ರಲಿಪಿಗಾರರ ಬಡ್ತಿ ಬಗ್ಗೆ

೨೦೬೮. ಶ್ರೀ ಸೋಮಪ್ಪ ಸುವರ್ಣ (ಮೂಡಬಿದಿರೆ): ಮಾನ್ಯ ಗೃಹ ಹಾಗೂ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪೋಲೀಸ್ ಇಲಾಖೆಯಲ್ಲಿನ ಎಷ್ಟು ಶೀಪ್ರಲಿಪಿಗಾರರು ಬಡ್ತಿಯನ್ನು ಪಡೆದಿರುತ್ತಾರೆ?

ಆ) ಯಾವಾಗ ಕೇಡರ್ ಮತ್ತು ನೇಮಕಾತಿ ಸೇವಾ ನಿಯಮಗಳನ್ನು ತಿದ್ದುಪಡಿ ಮಾಡಲಾಗುವುದು?

ಇ) ಈ ಬಗ್ಗೆ ಪೋಲೀಸ್ ಇಲಾಖೆ ಮತ್ತು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ?

ಈ) ಈಗಲಾದರೂ ತಕ್ಷಣ ಬಡ್ತಿಯ ಸೌಲಭ್ಯ ಕಲ್ಪಿಸಲು ಕ್ರಮ ತೆಗೆದುಕೊಳ್ಳಲಾಗುವುದೆ?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು):-

ಅ) ಇಲ್ಲ.

ಆ) ಕೇಡರ್ ಮತ್ತು ನೇಮಕಾತಿ ತಿದ್ದುಪಡಿ ಪ್ರಸ್ತಾವನೆ ಡಿ.ಪಿ.ಎ.ಆರ್. ಮತ್ತು ಆರ್ಥಿಕ ಇಲಾಖೆಗಳೊಂದಿಗೆ ಪರಿಶೀಲನೆಯಲ್ಲಿದೆ. ಈ ಬಗ್ಗೆ ತಿದ್ದುಪಡಿಯನ್ನು ಆದಷ್ಟು ಬೇಗನೆ ಮಾಡಲಾಗುವುದು.

ಇ) ಪ್ರಥಮ ದರ್ಜೆ ಸಹಾಯಕರು ಮತ್ತು ಶೀಪ್ರಲಿಪಿಗಾರರಿಗೆ ಬಡ್ತಿ ನೀಡಲು ಅನುಪಾತ ಪದ್ಧತಿಯನ್ನು ನಿಗದಿ ಪಡಿಸುವ ಬಗ್ಗೆ ಪೋಲೀಸ್ ಇಲಾಖೆಯ ಸಿಬ್ಬಂದಿಯ ವ್ಯಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.